SCCH – 01
MVC No.3497 OF 2024
RW1

**ದಿನಾಂಕಃ 17.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**
**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಎಸ್.ಕೆ.ಪಿ ರವರಿಂದಃ**

1. ಇಂಜಿನ್ ಸಂಖ್ಯೆ **AZXWRK80579** ಹೊಂದಿರುವಂತಹ ಆಟೋ ರಿಕ್ಷಾಗೆ ದಿನಾಂಕ 07.02.2024 ರಂದು **KA-02-AK-0213** ಎಂಬುದಾಗಿ ನೋಂದಣಿ ಸಂಖ್ಯೆಯನ್ನು ಕೊಡಲಾಗಿದೆ ಎಂದರೆ ಸರಿ. ಸದರಿ **KA-02-AK-0213** ಸಂಖ್ಯೆಯ ಆಟೋ ರಿಕ್ಷಾಗೆ ನಮ್ಮ ಸಂಸ್ಥೆಯಿಂದ ವಿಮಾ ಪಾಲಿಸಿಯನ್ನು ಕೊಡಲಾಗಿದೆ ಮತ್ತು ಆ ವಿಮಾ ಪಾಲಿಸಿಯನ್ನು ದಿನಾಂಕ 01.02.2024 ರಂದು ನೀಡಲಾಗಿದೆ.

2. ಸದರಿ ವಿಮಾ ಪಾಲಿಸಿಯನ್ನು ನೀಡುವಂತಹ ಸಮಯದಲ್ಲಿ ಸದರಿ ಆಟೋ ರಿಕ್ಷಾಗೆ ಸಂಬಂಧ ಪಟ್ಟಂತಹ FC ಮತ್ತು RC ಮತ್ತು ಪರ್ಮಿಟ್ ಗಳನ್ನು ನೋಡಿ ಪರಿಶೀಲನೆ ಮಾಡಿದ್ದೇವೆ ಎಂದರೆ ಕೇವಲ FC ಮತ್ತು RC ಗಳನ್ನು ಮಾತ್ರ ಪರಿಶೀಲನೆ ಮಾಡಿದ್ದೇವೆ.

3. ಮೇಲೆ ಹೇಳಿದಂತಹ ಆಟೋರಿಕ್ಷಾ ವಾಹನವು ಪ್ರಯಾಣಿಕರ ವಾಹನ ಆಗಿದೆ.

4. ಯಾವ ಕಾರಣದಿಂದ ಮೇಲೆ ಹೇಳಿದಂತಹ ಆಟೋ ರಿಕ್ಷಾ ವಾಹನದ ಪರ್ಮಿಟ್ ಅನ್ನು ನಾವು ಪರಿಶೀಲಿಸದೇ ವಿಮಾ ಪಾಲಿಸಿಯನ್ನು ನೀಡಿದ್ದೇವೆ ಎಂದರೆ ಆ ಪಾಲಿಸಿಯನ್ನು ನೀಡಿದಂತಹ ವ್ಯಕ್ತಿಯು ಆ ರೀತಿ ಮಾಡಿದ್ದಾರೆ.

5. ವಾಣಿಜ್ಯ ಉದ್ದೇಶಗಳಿಗಾಗಿ ಬಳಸುವಂತಹ ವಾಹನಗಳಿಗೆ ವಿಮಾ ಪಾಲಿಸಿಯನ್ನು ಕೊಡುವಂತಹ ಸಮಯದಲ್ಲಿ ನಾವು ಆ ವಾಹನಕ್ಕೆ ಸಂಬಂಧಿಸಿದ ಪರ್ಮಿಟ್ ಅನ್ನು ಪರಿಗಣಿಸಿ ನಂತರವೇ ಪರ್ಮಿಟ್ ಅನ್ನು ಕೊಡಬೇಕು ಎಂದರೆ ಸುಳ್ಳು.

6. ಮೇಲೆ ಹೇಳಿದ ಆಟೋ ರಿಕ್ಷಾ ವಾಹನಕ್ಕೆ ವಿಮಾ ಪಾಲಿಸಿಯನ್ನು ನೀಡುವಂತಹ ಸಮಯದಲ್ಲಿ ಆ ವಾಹನಕ್ಕೆ ಸಂಬಂಧಿಸಿದ ಪರ್ಮಿಟ್ ತೆಗೆದುಕೊಳ್ಳಲು ನಮಗೆ ತೊಂದರೆ ಇರಲಿಲ್ಲ ಎಂದರೆ ನಾವು ತೆಗೆದುಕೊಳ್ಳುವುದಿಲ್ಲ.

7. ದಿನಾಂಕ 07.02.2024 ರಂದು ಮೇಲೆ ಹೇಳಿದಂತಹ ವಾಹನ ಸಂಖ್ಯೆ **KA-02-AK-0213** ಸಂಖ್ಯೆಯ ಆಟೋ ರಿಕ್ಷಾ ವಾಹನಕ್ಕೆ ಪರ್ಮಿಟ್ ಪಡೆದುಕೊಳ್ಳಲು 4,537=00 ರೂಪಾಯಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ಅಪಘಾತದ ಸಂಬಂಧವಾಗಿ ಮಾಹಿತಿಗಳನ್ನು ಕೇಳಿ ಸದರಿ ವಾಹನ ಸಂಖ್ಯೆ **KA-02-AK-0213** ಸಂಖ್ಯೆಯ ಆಟೋ ರಿಕ್ಷಾ ವಾಹನದ ಮಾಲೀಕರಿಗೆ ನಮ್ಮ ಸಂಸ್ಥೆಯಿಂದ ನೋಟೀಸು ಕೊಡಲಾಗಿದೆ, ಆದರೆ ಆತನು ನಮಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆ ರೀತಿ ನಾವು ನೋಟೀಸು ಕೊಟ್ಟಿದ್ದೆವು ಎನ್ನುವ ಸಂಬಂಧವಾಗಿ ನಾವು ಯಾವುದೇ ದಾಖಲೆಯನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

9. ನಾವು ಹೇಳಿದ ಹಾಗೆ ನಾವು ಯಾವುದೇ ನೋಟೀಸನ್ನು ಸದರಿ ವಾಹನದ ಮಾಲೀಕರಿಗೆ ನೀಡಿರುವುದಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಾ ಇದ್ದೇನೆ ಎಂದರೆ ಸುಳ್ಳು.

10. ಪೋಲೀಸರು ಸಲ್ಲಿಸಿರುವಂತಹ ಅಂತಿಮ ವರದಿಯಲ್ಲಿ ವಾಹನಕ್ಕೆ ಅಪಘಾತದ ಸಮಯದಲ್ಲಿ ಪರ್ಮಿಟ್ ಇರುವುದಿಲ್ಲ ಎಂದು ಆರೋಪ ಮಾಡಿರುವುದಿಲ್ಲ ಎಂದರೆ ಪೋಲೀಸರು ಸರಿಯಾಗಿ ತನಿಖೆಯನ್ನು ಮಾಡಿರುವುದಿಲ್ಲ.

11. ವಾಹನ ಸಂಖ್ಯೆ **KA-02-AK-0213** ಸಂಖ್ಯೆಯ ಆಟೋ ರಿಕ್ಷಾ ವಾಹನಕ್ಕೆ ಪರ್ಮಿಟ್ ಇರಲಿಲ್ಲ ಎನ್ನುವ ಸಂಬಂಧವಾಗಿ RTO ಕಛೇರಿಯವರನ್ನು ಕರೆಸಿ ವಿಚಾರಣೆ ಮಾಡಲು ನಮಗೆ ತೊಂದರೆ ಇರುವುದಿಲ್ಲ.

12. ವಾಹನ ಸಂಖ್ಯೆ **KA-02-AK-0213** ಸಂಖ್ಯೆಯ ಆಟೋ ರಿಕ್ಷಾ ವಾಹನಕ್ಕೆ ನಮ್ಮ ಸಂಸ್ಥೆಯಿಂದ ವಿಮಾ ಪಾಲಿಸಿಯನ್ನು ನೀಡುವಂತಹ ಸಮಯದಲ್ಲಿ ಸದರಿ ವಾಹನಕ್ಕೆ ಪರ್ಮಿಟ್ ಇತ್ತು ಮತ್ತು ನಾವು ಅರ್ಜಿದಾರರಿಗೆ ಪರಿಹಾರವನ್ನು ಕೊಡಬೇಕಾಗಿದೆ ಮತ್ತು ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಾ ಇದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.